# IN THE COURT OF THE ADDL. SENIOR CIVIL JUDGE & JMFC., GUBBI

# **OS - 26/2025**

Witness present and duly sworn on : 02.02.2026.

Cross Examination: by Counsel for Defendant No.7 :

ಈ ದಾವೆಯಲ್ಲಿ ನಾನು ವಾದಿ ಆಗಿಲ್ಲ ಎಂದರೆ ಸರಿ. ನಾನು ಈ ದಾವೆಯಲ್ಲಿ ಪಕ್ಷಗಾರರು ಆಗದೆ ಇದ್ದ ಕಾರಣ ನನಗೆ ದಾವೆಯ ವಿಚಾರಗಳು ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ವ್ಯವಸಾಯ ಗಾರನಲ್ಲ ಎಂದರೆ ಸರಿಯಲ್ಲ. ನಾನು ವ್ಯವಸಾಯ ಮತ್ತು ಕಾಂಟ್ರಾಕ್ಟ ಕೆಲಸ ಮಾಡುತ್ತೇನೆ. ನನ್ನ ತಂದೆ ಈಗ ವ್ಯವಸಾಯ ಮಾಡುತ್ತಿದ್ದಾರೆಂದರೆ ಸರಿ. ನನ್ನ ತಂದೆಯ ಆರೋಗ್ಯ ಚೆನ್ನಾಗಿ ಇದೆ ಎಂದರೆ ಸರಿಯಲ್ಲ. ನನ್ನ ತಂದೆ ಬಂದು ಸಾಕ್ಷಿ ಕೊಟ್ಟರೆ ಸತ್ಯಾಂಶ ಹೊರಬರುತ್ತದೆಂದು ನಾನು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ನನ್ನ ಮುತ್ತಾತ ವೀರಪ್ಪ ಎಂದರೆ ಸರಿ. ಸದರಿ ವೀರಪ್ಪನವರಿಗೆ ಬೀರಲಿಂಗಯ್ಯ, ಈರಯ್ಯ, ಮುದ್ದಯ್ಯ, ಕರಿಯಪ್ಪ ಎಂಬ ನಾಲ್ಕು ಜನ ಮಕ್ಕಳು ಎಂದರೆ ಸರಿಯಲ್ಲ. ನಾವು ತಾತ ಮುದ್ದಯ್ಯ @ ಮುದ್ದೇಗೌಡರವರ ವಂಶಸ್ಥರು ಎಂದರೆ ಸರಿ. ನನ್ನ ತಾತ ಮುದ್ದಯ್ಯ ರವರಿಗೆ ಮುದ್ದಲಿಂಗಪ್ಪ, ಶಿವಲಿಂಗಯ್ಯ, ಬೀರಲಿಂಗಯ್ಯ, ಕರೇಗೌಡ ಎಂಬ 4 ಜನ ಮಕ್ಕಳು. ನನ್ನ ತಾತ ರವರಿಗೆ ಇಬ್ಬರು ಹೆಂಡತಿಯರು. ನನ್ನ ತಾತನ ಮೊದಲನೆಯ ಹೆಂಡತಿಯ ಹೆಸರು ಪುಟ್ಟಮ್ಮ ಎಂದರೆ ಹೆಸರು ನನಗೆ ಗೊತ್ತಿಲ್ಲ. ಸದರಿ ಪುಟ್ಟಮ್ಮ ರವರಿಗೆ ಮುದ್ದಲಿಂಗಯ್ಯ ಎಂಬ ಮಗ ಎಂದರೆ ಸರಿ. ನನ್ನ ಅಜ್ಜಿಯ ಹೆಸರು ಗಿರಿಯಮ್ಮ ಮತ್ತು ಅವರು ನನ್ನ ತಾತನ 2 ನೇ ಹೆಂಡತಿ ಎಂದರೆ ಸರಿ. ಗಿರಿಯಮ್ಮ ರವರಿಗೆ 4 ಜನ ಮಕ್ಕಳು ಎಂದರೆ ಸರಿ. ಅವರುಗಳು ಶಿವಲಿಂಗಯ್ಯ, ಬೀರಲಿಂಗಯ್ಯ, ಜಯಮ್ಮ, ಕರೆಗೌಡ ಎಂದರೆ ಸರಿ. ಈ ದಾವೆಯ 7 ನೇ ಪ್ರತಿವಾದಿ ಬೀರಯ್ಯ ರವರು ಬೀರಲಿಂಗಯ್ಯ ಬಿನ್ ಬೀರಲಿಂಗಯ್ಯ ರವರ ಮಗ ಎಂದರೆ ಸರಿ.

ದಾವಾ ಆಸ್ತಿಯನ್ನು 7 ನೇ ಪ್ರತಿವಾದಿಯು ಕ್ರಯಕ್ಕೆ ಪಡೆದಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಾತ ರವರು 2000 ರಲ್ಲಿ ಮರಣ ಹೊಂದಿದ ನಂತರ ದಾಖಲೆ ಸೃಷ್ಟಿಸಿದ್ದಾರೆ. ಈ ದಾವೆಯ 7 ನೇ ಪ್ರತಿವಾದಿಯು ದಾವಾ ಆಸ್ತಿಯನ್ನು ದಿನಾಂಕಃ 29.05.2002 ರಂದು 8 ನೇ ಪ್ರತಿವಾದಿ ಗಂಡ ಮುದ್ದಯ್ಯ ಮತ್ತು 9 ಮತ್ತು 10 ನೇ ಪ್ರತಿವಾದಿಯ ತಂದೆ ಮುದ್ದಯ್ಯ ರವರು ನೊಂದಾಯಿತ ಕ್ರಯಪತ್ರ ಬರೆದುಕೊಟ್ಟಿದ್ದಾರೆಂದರೆ ಇರಬಹುದು. ಸಾಕ್ಷಿ ಮುಂದುವರೆದು ಮುದ್ದಯ್ಯ ಎಂಬ ವ್ಯಕ್ತಿಯನ್ನು ಕರೆದುಕೊಂಡು ಹೋಗಿ ದಾಖಲೆಯನ್ನು ಸೃಷ್ಟಿಸಿದ್ದಾರೆ. ಕ್ರಯಪತ್ರದ ಆಧಾರದ ಮೇಲೆ 7 ನೇ ಪ್ರತಿವಾದಿಯ ಹೆಸರಿಗೆ MR ಮತ್ತು ಖಾತೆ ಪಹಣಿ ಬದಲಾವಣೆ ಆಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸೃಷ್ಟಿರುವ ದಾಖಲೆಯ ಆಧಾರದ ಮೇಲೆ ಮಾಡಿಕೊಂಡಿರುತ್ತಾರೆ. MR No.1/2002-03 ನಿಪಿ-5 ರಂತೆ 7 ನೇ ಪ್ರತಿವಾದಿಯ ಹೆಸರಿಗೆ ಆಗಿದೆ ಎಂದರೆ ಸರಿ. ಕ್ರಯಪತ್ರ ಮತ್ತು ಕಂದಾಯ ದಾಖಲೆಗಳಂತೆ 7 ನೇ ಪ್ರತಿವಾದಿಯು ಆಸ್ತಿಯ ಸ್ವಾಧೀನದಲ್ಲಿ ಇದ್ದಾರೆ ಎಂದರೆ 7 ನೇ ಪ್ರತಿವಾದಿಯು ಸರ್ವೆ ನಂ.16/3 ಜಮೀನಿನ ಸ್ವಾಧೀನದಲ್ಲಿ ಇದ್ದು ಬೇರೆ ವ್ಯಕ್ತಿಯಿಂದ ಕ್ರಯಪತ್ರವನ್ನು ಸೃಷ್ಟಿಸಿರುತ್ತಾರೆ. 7 ನೇ ಪ್ರತಿವಾದಿಯ ಹೆಸರಿಗೆ ಆಗಿರುವ ಕ್ರಯಪತ್ರ ಮತ್ತು ಕಂದಾಯ ದಾಖಲೆಗಳು ಸರ್ವೆ ನಂ.16/2 ಗೆ ಸಂಬಂದಿಸಿದಂತೆ ನಾನು ಎಲ್ಲಿಯೂ ಪ್ರಶ್ನಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ನಾವು ಸರ್ವೆ ನಂ.16/12 ರಲ್ಲಿ ಇರುವ ಕಾರಣ ಮತ್ತು 7 ನೇ ಪ್ರತಿವಾದಿಯು ಸರ್ವೆ ನಂ.16/3 ರಲ್ಲಿ ಇರುವ ಕಾರಣ ನಾವು ಪ್ರಶ್ನಿಸಿರುವುದಿಲ್ಲ. ಸರ್ವೆ ನಂ.16/2 ರಲ್ಲಿ ಅಥವಾ ಸರ್ವೆ ನಂ.16/6 ಜಮೀನಿನ ದಾಖಲೆಗಳನ್ನು ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ. ಸರ್ವೆ ನಂ.16/2 ಅಥವಾ ಸರ್ವೆ ನಂ.16/12 ರಲ್ಲಿ ನಮ್ಮ ವಂಶಸ್ಥರು ಇರುವ ಬಗ್ಗೆ ದಾಖಲೆ ಹಾಜರುಪಡಿಸಿದ್ದಿರಾ ಎಂದರೆ ನನ್ನ ತಾತ ಖರೀದಿ ಮಾಡಿರುವ ದಾಖಲೆಯನ್ನು ಹಾಜರುಪಡಿಸಿದ್ದೇನೆ.

ನನ್ನ ತಾತ ರವರು ಮೈಲಯ್ಯ ಮಲ್ಲಯ್ಯ ರವರಿಂದ ದಿನಾಂಕಃ 04.12.1967 ರಂದು ಖರೀದಿ ಮಾಡಿರುತ್ತಾರೆ. 1967 ರ ಕ್ರಯಪತ್ರದ ಆಧಾರದ ಮೇಲೆ ನನ್ನ ತಾತನ ಹೆಸರಿಗೆ ಖಾತೆ ಪಹಣಿ ಬದಲಾವಣೆ ಆಗಿದೆ. ಸದರಿ ಖಾತೆ ಪಹಣಿಯನ್ನು ನಾನು ಹಾಜರುಪಡಿಸಿದ್ದೇನೆ. ನನ್ನ ತಾತನ ಹೆಸರಿಗೆ ಕಂದಾಯ ದಾಖಲೆಗಳು ವರ್ಗಾವಣೆ ಆಗಿಲ್ಲ

ಮತ್ತು ಅಂತಹ ದಾಖಲೆಗಳನ್ನು ನಾನು ಹಾಜರುಪಡಿಸದೆ ಇದ್ದರು ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಕ್ರಯಪತ್ರದ ಆಧಾರದ ಮೇಲೆ ಕಂದಾಯ ದಾಖಲೆಗಳ ಬದಲಾವಣೆಗೆ ಅರ್ಜಿ ಕೊಟ್ಟಿದ್ದರಾ ಎಂದರೆ ಆಗಿನ ಕಾಲದ ಮಾಹಿತಿ ನನಗೆ ಗೊತ್ತಿರುವುದಿಲ್ಲ. ನನ್ನ ತಾತ ಮುದ್ದಯ್ಯ ನವರು 2000 ಇಸ್ವಿಯಲ್ಲಿ ಪೌತಿ ಆದರು ದಿನಾಂಕ ನನಗೆ ಗೊತ್ತಿಲ್ಲ. ನಾನು ಸದರಿ ಮುದ್ದಯ್ಯ @ ಮುದ್ದೇಗೌಡ ರವರ ಮೊಮ್ಮಗ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿದ್ದೇನೆ.

7 ನೇ ಪ್ರತಿವಾದಿಯು ಸರ್ವೆ ನಂ.16/3 ರಲ್ಲಿ ಇರುವುದಿಲ್ಲ ಮತ್ತು ಅವರು ಸರ್ವೆ ನಂ.16/2 ರಲ್ಲಿ ಇದ್ದಾರೆ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿಯು ಅಳತೆ ಕಾರ್ಯಕ್ಕೆ ಅರ್ಜಿ ಕೊಟ್ಟಿದ್ದರಾ ಎಂದರೆ ಅದರ ಮಾಹಿತಿ ನನಗೆ ಇರುವುದಿಲ್ಲ. 7 ನೇ ಪ್ರತಿವಾದಿ ಅಳತೆ ಮಾಡಲು ಯಾವುದೇ ಅರ್ಜಿ ಕೊಟ್ಟಿರುವುದಿಲ್ಲ ಆದರೆ ನಾವು ಸರ್ವೆ ಅಧಿಕಾರಿಗಳೊಂದಿಗೆ ಶಾಮಿಲಾಗಿ ಮತ್ತು ಸರ್ವೆ ನಂ.16/2 ಜಮೀನನ್ನು ಕಬಳಿಸಲು ಸರ್ವೆ ದಾಖಲೆಗಳನ್ನು ಸೃಷ್ಟಿಸಿದ್ದೇವೆಂದರೆ ಸರಿಯಲ್ಲ. ದಿನಾಂಕಃ 04.12.1967 ರಂದು ಮೈಲಯ್ಯ ಮತ್ತು ಆತನ ಮಗ ಮಲ್ಲಯ್ಯ ನವರು ಕ್ರಯಪತ್ರವನ್ನು ಮುದ್ದಯ್ಯ ಬಿನ್ ಈರಯ್ಯನವರಿಗೆ ಬರೆದುಕೊಟ್ಟಿದ್ದರು ಎಂದರೆ ಸರಿ. ನನ್ನ ತಾತನ ಹೆಸರು ಮುದ್ದಯ್ಯ ಬಿನ್ ವೀರಪ್ಪ ಎಂದರೆ ಈರಪ್ಪ ಮತ್ತು ವೀರಪ್ಪ ಎಂದು ಕರೆಯುತ್ತಾರೆ. ನನ್ನ ಮುತ್ತಾತರವರನ್ನು ಈರಪ್ಪ ಮತ್ತು ವೀರಪ್ಪ ಎಂದು ಕರೆಯುತ್ತಿದ್ದರು ಎಂದು ತೋರಿಸಲು ವಂಶವೃಕ್ಷವನ್ನು ಹಾಜರುಪಡಿಸಿರುತ್ತೇನೆ. ಸದರಿ ಕ್ರಯಪತ್ರ ನನ್ನ ತಾತ ಮುದ್ದಯ್ಯ ಮತ್ತು ಸದರಿ ಕ್ರಯಪತ್ರಗಳು 8 ನೇ ಪ್ರತಿವಾದಿಯ ಗಂಡ ಮತ್ತು 9, 10 ನೇ ಪ್ರತಿವಾದಿಗಳ ತಂದೆ ಮುದ್ದಯ್ಯ ರವರ ಹೆಸರಿಗೆ ಆಗಿರುವ ಕ್ರಯಪತ್ರ ಎಂದರೆ ಸದರಿ ಸಮಯದಲ್ಲಿ ಮುದ್ದಯ್ಯ ಬಿನ್ ಈರಯ್ಯ ರವರು ವಯಸ್ಕರಾಗಿರುವುದಿಲ್ಲ.

ಸರ್ವೆ ನಂ.16 ರಲ್ಲಿ 19 ಪೋಡಿಗಳು ಇವೆ. ಯಾವ ಪೋಡಿಯಲ್ಲಿ ಯಾರು ಸ್ವಾಧೀನದಲ್ಲಿ ಇದ್ದಾರೆ ಎಂದು ಸಂಪೂರ್ಣವಾಗಿ ನನಗೆ ಗೊತ್ತಿಲ್ಲ. ಸರ್ವೆ ನಂ.16/1 ರಲ್ಲಿ ಯಾರು ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.16/2 ರ ಸ್ವಾಧೀನದಲ್ಲಿ ರಂಗಯ್ಯ ರವರು ಇದ್ದಾರೆ. ಸರ್ವೆ ನಂ.16/2 ರಂಗಯ್ಯ ರವರಿಗೆ ಹೇಗೆ ಬಂದಿದೆ ಮತ್ತು ಅದರ

ಚಕ್ಕುಬಂದಿ ನನಗೆ ಗೊತ್ತಿಲ್ಲ. ಸರ್ವೆ ನಂ.16/3 ರಲ್ಲಿ ಬೀರಯ್ಯ ರವರು ಸ್ವಾಧೀನದಲ್ಲಿ ಇದ್ದಾರೆ. ಸರ್ವೆ ನಂ.16/3 ಬೀರಯ್ಯ ರವರಿಗೆ ಸೃಷ್ಟಿಸಿದ ದಾಖಲೆಯ ಮೇಲೆ ಬಂದಿರುತ್ತದೆ. ಸರ್ವೆ ನಂ.16/4 ನನ್ನ ತಾತನ ಪಿತ್ರಾರ್ಜಿತ ಆಸ್ತಿ, ಅವರಿಂದ ನನ್ನ ತಂದೆಗೆ ಬಂದಿರುತ್ತದೆ. ಸದರಿ ಸರ್ವೆ ನಂ.16/4 ರ ಮೂಲ ದಾಖಲೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು 4 ತಲೆಮಾರಿನಿಂದ ಬಂದಿರುತ್ತದೆ. ಸರ್ವೆ ನಂ.16/5, ಸರ್ವೆ ನಂ.16/6, ಸರ್ವೆ ನಂ.16/7, ಸರ್ವೆ ನಂ.16/8, ಸರ್ವೆ ನಂ.16/9, ಸರ್ವೆ ನಂ.16/11 ರಲ್ಲಿ ರಲ್ಲಿ ಯಾರು ಇದ್ದಾರೆ ಮತ್ತು ಅದರ ಚಕ್ಕುಬಂದಿ ನನಗೆ ಗೊತ್ತಿಲ್ಲ. ಸರ್ವೆ ನಂ.16/10 ನನಗೆ ಬಂದಿರುತ್ತದೆ, ಅದನ್ನು ನಾವು ಬಸಪ್ಪ ರವರಿಂದ ಸರ್ವೆ ನಂ.58/6 ರಲ್ಲಿ 28 ಗುಂಟೆ ಅದಲು ಬದಲು ಮಾಡಿಕೊಂಡಿದ್ದೇವೆ. ನಾವು ಸರ್ವೆ ನಂ.58/6 ಕೊಟ್ಟಿರುತ್ತೇವೆ ಮತ್ತು ಅವರು ನಮಗೆ ಸರ್ವೆ ನಂ.16/10 ಮತ್ತು ಸರ್ವೆ ನಂ.16/5 ಬಿ ಕೊಟ್ಟಿರುತ್ತಾರೆ. ಅದಲು ಬದಲು ದಾಖಲೆಯನ್ನು ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ. ದಾವಾ ಆಸ್ತಿ ಸರ್ವೆ ನಂ.16/12 ರಲ್ಲಿ ನಾವು ಇದ್ದೇವೆ. ಸರ್ವೆ ನಂ.16/12 ನಮಗೆ ದಿನಾಂಕಃ 04.12.1967 ಕ್ರಯದ ಆಧಾರದ ಮೇಲೆ ಬಂದಿರುತ್ತದೆ. ಸದರಿ ಕ್ರಯಪತ್ರದ ಆಧಾರದ ಮೇಲೆ ಖಾತೆ ಪಹಣಿ ಆಗಿಲ್ಲ ಎಂದರೆ ತಪ್ಪಾಗಿ ಸರ್ವೆ ನಂ.16/12 ರ ಬದಲಿಗೆ ಸರ್ವೆ ನಂ.16/2 ರಲ್ಲಿ ಮಾಡಿರುತ್ತಾರೆ. ಸರ್ವೆ ನಂ.16/12 ರ ಚಕ್ಕುಬಂದಿ ಪೂರ್ವಕ್ಕೆ ಪುಟ್ಟಲಿಂಗಮ್ಮ, ಪಶ್ಚಿಮಕ್ಕೆ ರಂಗಯ್ಯ, ಚಿಕ್ಕಮಾರಯ್ಯ, ಉತ್ತರಕ್ಕೆ ಬೀರಯ್ಯ, ದಕ್ಷಿಣಕ್ಕೆ ಪುಟ್ಟಲಿಂಗಮ್ಮ. ದಾವಾ ಆಸ್ತಿಯ ಚಕ್ಕಬಂದಿ ಮತ್ತು 1967 ರ ಕ್ರಯಪತ್ರದ ಚಕ್ಕುಬಂದಿಗೆ ತಾಳೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾವು ಕ್ರಯದ ಮೂಲಕ ಆಸ್ತಿಯನ್ನು ಖರೀದಿ ಮಾಡಿಲ್ಲ ಮತ್ತು 8 ರಿಂದ 10 ನೇ ಪ್ರತಿವಾದಿಗಳ ಸಂಬಂಧಿಕರಾದ ಮುದ್ಮಯ್ಯ ರವರು ಖರೀದಿ ಮಾಡಿರುವ ಕ್ರಯಪತ್ರವನ್ನು ದುರುಪಯೋಗ ಪಡಿಸಿಕೊಂಡಿದ್ದೇನೆಂದರೆ ಸರಿಯಲ್ಲ. ನನ್ನ ಮುತ್ತಾನ ಹೆಸರು ವೀರಪ್ಪ ಎಂದರೆ ಸರಿ. ವಂಶವೃಕ್ಷವನ್ನು ಹಾಜರುಪಡಿಸಿದರೆ ಸತ್ಯಾಂಶ ಹೊರಬರುತ್ತದೆಂದು ಅಂತಹ ದಾಖಲೆಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ ಎದಂರೆ ಸರಿಯಲ್ಲ. ನಮಗೆ ದಾವಾ ಆಸ್ತಿಯಲ್ಲಿ ಯಾವುದೇ ಸಂಬಂಧ ಇಲ್ಲದೆ ಇದ್ದರು ಸಹ 7 ನೇ ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**Cross Examination: by Counsel for Defendant No.8 to 10:**

Counsel called out absent. Hence, taken as nil.

**Re examination - Nil**

(Typed to my dictation in open court)

R.O.I & A.C.

Addl. Senior Civil Judge and
JMFC., Gubbi